


# ಮಾಹಿತಿ ಸಂಜೀವಿನಿ ‘ಹನೂಮಾನ್’

**ದೇಶಿಯವಾಗಿ ಅಭಿವೃದ್ಧಿಪಡಿಸಿದ ‘ಹನೂಮಾನ್’ ಮಾಹಿತಿಯ ಪರ್ವತವನ್ನೇ ಹೊತ್ತು ತಂದಿದ್ದಾನೆ. ಅಷ್ಟಕ್ಕೂ ಯಾರೀ ಹನೂಮಾನ್?**

**■ ಶಶಿಕುಮಾರ್ ಸಿ.**

‘ಜನರೇಟಿವ್ ಎಐ’ ಹಿಂದೆ ಬಿದ್ದಿರುವ ಜಗತ್ತಿನ ಮುಂಚೂಣಿ ದೇಶಗಳಿಗಿಂತ ತಾನೇನೂ ಹಿಂದುಳಿದಿಲ್ಲ ಎನ್ನುವಂತೆ ಭಾರತವು ದೇಶಿಯವಾಗಿ ಅಭಿವೃದ್ಧಿಪಡಿಸಿದ ‘ಹನೂಮಾನ್’ ಎಐ ಪರಿಚಯಿಸಿದೆ. ರಾಮಾಯಣದಲ್ಲಿ ಹನುಮಂತ ಸಂಜೀವಿನಿ ಪರ್ವತ ಹೊತ್ತು ತಂದಂತೆ ನಮ್ಮ ‘ಹನೂಮಾನ್’ ಮಾಹಿತಿಯ ಬೆಟ್ಟವನ್ನೇ ಹೊತ್ತು ತಂದಿದೆ.

‘ಹನೂಮಾನ್’ ಕನ್ನಡ, ತೆಲುಗು, ತಮಿಳು ಸೇರಿದಂತೆ ಭಾರತದ ಹಲವು ಭಾಷೆಗಳಲ್ಲಿ ಪಠ್ಯ ಮತ್ತು ಧ್ವನಿ ರೂಪದಲ್ಲಿ ಉತ್ತರಿಸುವ ಕೃತಕ ಬುದ್ಧಿಮತ್ತೆ (ಎಐ) ಚಾಟ್‌ಬಾಟ್ ಆಗಿದೆ. ಗೂಗಲ್ ಸೇರಿದಂತೆ ಜಾಗತಿಕವಾಗಿ ಸದ್ದು ಮಾಡುತ್ತಿರುವ ದೈತ್ಯ ಟೆಕ್ ಕಂಪನಿಗಳು ಅಭಿವೃದ್ಧಿ ಪಡಿಸಿದ ದೊಡ್ಡ ಭಾಷಾ ಮಾದರಿಗಳಿಂದ (ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ಸ್‌ಗಳ–LLMs) ಕೂಡಿದ ಎಐ ಚಾಟ್‌ಬಾಟ್‌ಗಳ ಒದಗಿಸುವ ಮಾಹಿತಿಯ ನಿಖರತೆ ಮತ್ತು ಪಕ್ಷಪಾತದ ಬಗ್ಗೆ ಎಲ್ಲೆಡೆ ಚರ್ಚೆ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಸ್ವದೇಶಿ ಎಐ ಚಾಟ್‌ಬಾಟ್ ಅಭಿವೃದ್ಧಿಯು ದೇಶದ ಮಟ್ಟಿಗೆ ದೊಡ್ಡ ಸಾಧನೆಯೇ ಸರಿ.

‘ಹನೂಮಾನ್’ ಓಪನ್ ಸೋರ್ಸ್ ಇಂಡಿಕ್ ಭಾಷೆಯ, ಎಐ ಮಾದರಿಗಳ ಸರಣಿಯ ಒಂದು ಭಾಗ. ಇದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ–ಬಾಂಬೆಯ ಮಹತ್ತರ ಯೋಜನೆ. ಇದನ್ನು ವೈದ್ಯಕೀಯ ಉಪಕರಣಗಳ ತಯಾರಕ ಕಂಪನಿಯಾದ ‘ಸೀತಾ ಮಹಾಲಕ್ಷ್ಮಿ ಹೆಲ್ತ್‌ಕೇರ್’ (SML) ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಐಐಟಿ–ಬಾಂಬೆಯು ರಿಲಯನ್ಸ್ ಜಿಯೊ ಮತ್ತು ಎಸ್‌ಎಂಎಲ್ ಜೊತೆಗೆ ಭಾರತ್‌ಜಿಪಿಟಿ ಎಕೋಸಿಸ್ಟಂ ಅನ್ನೂ ಅಭಿವೃದ್ಧಿಪಡಿಸಲು ಒಟ್ಟಿಗೆ ಕೈಜೋಡಿಸಿದೆ. ಅಬುಧಾಬಿಯ 3ಎಐ ಹೋಲ್ಡಿಂಗ್ ಸಹಯೋಗವೂ ಇದೆ.

ಹನೂಮಾನ್‌ನಲ್ಲಿ ಭಾರತೀಯ ಹಲವಾರು ಭಾಷೆಗಳಲ್ಲಿ ಪಠ್ಯ ಮತ್ತು ಭಾಷಣ ಎರಡನ್ನೂ ರಚಿಸಬಹುದು. ಈ ಮಾದರಿಯ ಮೊದಲ ಆವೃತ್ತಿಯು ಶೀಘ್ರವೇ ಬಿಡುಗಡೆಯಾಗಲಿದೆ. ಭಾರತದ ಪ್ರತಿಯೊಬ್ಬರನ್ನೂ ಎಐ ಕ್ಷೇತ್ರದಲ್ಲಿ ತೊಡಗಿಕೊಳ್ಳುವಂತೆ ಮಾಡುವ ಗುರಿಯನ್ನು ಹನೂಮಾನ್ ಹೊಂದಿದೆ. ಇದೊಂದು ಭಾರತೀಯ ಉಚಿತ ಜನರೇಟಿವ್ ಎಐ ಸಹಾಯಕವಾಗಿದ್ದು, ದೇಶದ ಅತಿದೊಡ್ಡ ಬಹುಭಾಷಾ ಮತ್ತು ಕೈಗೆಟುಕುವ ಜೆನ್‌ಎಐ ಪ್ಲಾಟ್‌ಫಾರ್ಮ್ ಎನಿಸಿದೆ. ಹನೂಮಾನ್ ಅಭಿವೃದ್ಧಿಯಿಂದ ಭಾರತವೂ ಈಗ ಅಧಿಕೃತವಾಗಿ ಜೆನ್‌ಎಐ (ಜನರೇಟಿವ್‌ಎಐ) ರೇಸ್‌ಗೆ ಕಾಲಿರಿಸಿದಂತಾಗಿದೆ.

ದೇಶದ 12 ಪ್ರಮುಖ ಭಾಷೆಗಳು ಸೇರಿದಂತೆ, 98 ಭಾಷೆಗಳಲ್ಲಿ ಅರ್ಥಮಾಡಿಕೊಳ್ಳುವ ಮತ್ತು ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಹೊಂದಿರುವ ಹನೂಮಾನ್, ಸದ್ಯ ಬಳಕೆಯಲ್ಲಿರುವ ಎಲ್ಲ ಎಐ ತಂತ್ರಜ್ಞಾನಗಳಿಂತಲೂ ಭಿನ್ನವಾಗಿದೆ ಎಂಬುದು ಐಐಟಿ–ಬಾಂಬೆ ತಜ್ಞರ ಅಭಿಪ್ರಾಯ.

ಚಾಲ್ತಿಯಲ್ಲಿರುವ ಎಐ ಚಾಟ್‌ಬಾಟ್‌ಗಳು ಇಂಗ್ಲಿಷ್‌ನಲ್ಲಿ ಮಾತ್ರ ಲಭ್ಯವಿದ್ದು, ಇದರಿಂದ ಭಾಷಾವೈವಿಧ್ಯತೆಯ ಭಾರತದಲ್ಲಿ ಅದೆಷ್ಟೋ ಮಂದಿ ಈ ಸೇವೆಯಿಂದ ದೂರ ಉಳಿಯುತ್ತಿದ್ದಾರೆ. ಈ ಕಾರಣಕ್ಕೆ ದೇಶದ ಬೇರೆ ಬೇರೆ ಭಾಷೆಗಳಲ್ಲೂ ಇದನ್ನು ಕಲ್ಪಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಎಐ ಕ್ಷೇತ್ರದಲ್ಲಿ ತೊಡಗಿಕೊಳ್ಳುವಂತೆ ಜನರನ್ನು ಪ್ರೇರೇಪಿಸಲು ಹನೂಮಾನ್ ಅಭಿವೃದ್ಧಿಪಡಿಸಲಾಗಿದೆ.

ಪಠ್ಯವನ್ನು ರಚಿಸುವುದು, ಭಾಷಾಂತರಿಸುವುದರ ಜೊತೆಗೆ ಸೃಜನಾತ್ಮಕ ವಿಷಯವನ್ನು ಸಂಭಾವ್ಯವಾಗಿ ರಚಿಸುವುದು ಸೇರಿದಂತೆ, ಹಲವಾರು ಕಾರ್ಯಚಟುವಟಿಕೆಗಳನ್ನು ಹನೂಮಾನ್ ಮಾಡಲಿದೆ. ದೈನಂದಿನ ಕೆಲಸ ಕಾರ್ಯಗಳಿಗೆ ಸ್ಪಂದಿಸಲಿರುವ ಹನೂಮಾನ್ ಅನ್ನು, ವೆಬ್ ಇಂಟರ್‌ಫೇಸ್ ಅಥವಾ ಆ್ಯಂಡ್ರಾಯ್ಡ್ ಅಪ್ಲಿಕೇಷನ್ ಮೂಲಕ ಬಳಸಬಹುದು. ಐಒಎಸ್‌ನಲ್ಲೂ ಇದರ ಸೇವೆಯನ್ನು ಕಲ್ಪಿಸುವ ಬಗ್ಗೆ ಈಗಾಗಲೇ ಕೆಲಸಗಳು ನಡೆಯುತ್ತಿವೆ. ಜನರೇಟಿವ್ ಎಐ ಸಾಮರ್ಥ್ಯದಲ್ಲಿ ದೇಶದ ಹಿಡಿತ ಹೆಚ್ಚಾಗಿಸುವುದು ನಮ್ಮ ಗುರಿ ಎನ್ನುತ್ತಾರೆ ಐಐಟಿ–ಬಾಂಬೆಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಗಣೇಶ್ ರಾಮಕೃಷ್ಣನ್. ■